# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
## (ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


ನಿಗಮ ಕಾರ್ಯಾಲಯ,
ನಂ.29, ವಿಜಯನಗರ 2ನೇ ಹಂತ
ಹಿನಕಲ್, ಮೈಸೂರು-17
CIN:U40109KA2004SGC035177

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಕಾರ್ಯ ಮತ್ತು ಪಾಲನೆ ಉಪ ವಿಭಾಗ,ಬನ್ನೂರು
ದೂರವಾಣಿ ಸಂಖ್ಯೆ : 08227 275506/07
E-Mail ID : cescbannur@gmail.com


ದಿನಾಂಕ 27.11.2019 ರಂದು ಬೆಳಗ್ಗೆ 11.00 ಗಂಟೆಗೆ **ಕಾರ್ಯನಿರ್ವಾಹಕ ಇಂಜಿನಿಯರ್** (ವಿ) ಕಾ ಮತ್ತು ಪಾ ವೃತ್ತ, ಮೈಸೂರು ರವರ ಅಧ್ಯಕ್ಷತೆಯಲ್ಲಿ ಬನ್ನೂರು ಉಪ-ವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು / ನೌಕರರುಗಳು.**

| | |
|---|---|
| ಶ್ರೀ ರಮೇಶ್ ಹೆಚ್ ಕೆ, | ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ನಂಜನಗೂಡು. |
| ಶ್ರೀ ಹರೀಶ್ ಜಿ | ಸ.ಕಾ.ಇಂ (ವಿ) (ಪ್ರಭಾರ), ಸ.ಇಂ (ವಿ) ಬನ್ನೂರು ಪಟ್ಟಣ ಶಾಖೆ, ಮಾದಿಗಹಳ್ಳಿ ಶಾಖೆ ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀಮತಿ ನಾಗವೇಣಿ ಎಂ | ಸ.ಇಂ (ವಿ) ತಾಂತ್ರಿಕ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ವಿಶ್ವನಾಥ್ ಎಸ್. ಎಲ್. | ಸ.ಇಂ (ವಿ) ಚಾಮನಹಳ್ಳಿ ಶಾಖೆ (ಪ್ರಭಾರ), ತುಂಬಲ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ಶ್ರೀನಿವಾಸ್ ಟಿ. ವಿ. | ಸ.ಇಂ (ವಿ) ಕೇತುಪುರ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)(ಪ್ರಭಾರ), ಆದ ಶ್ರೀ ಹರೀಶ್ ಜಿ, ರವರು ಹಾಜರಿದ್ದ ಅಧಿಕಾರಿ / ನೌಕರರುಗಳನ್ನು, ರೈತ ಮುಖಂಡರು, ರೈತರು ಹಾಗೂ ವಿದ್ಯುತ್ ಗ್ರಾಹಕರನ್ನು ಸಭೆಗೆ ಸ್ವಾಗತಿಸಿದರು.

ದಿನಾಂಕ : 21.08.2019 ನಡೆದ ಜನ ಸಂಪರ್ಕ ಸಭೆಯಲ್ಲಿ ಸ್ವೀಕರಿಸಿದ ದೂರುಗಳ ಬಗ್ಗೆ ಮಾನ್ಯ **ಕಾರ್ಯನಿರ್ವಾಹಕ ಇಂಜಿನಿಯರ್ (ವಿ),** ರವರು ಕೂಲಂಕುಷವಾಗಿ ಪರಿಶೀಲಿಸಿ, 13 ದೂರುಗಳಲ್ಲಿ 07 ದೂರುಗಳನ್ನು ಸರಿಪಡಿಸಲಾಗಿದ್ದು ಮತ್ತು 06 ದೂರುಗಳನ್ನು ಶೀಘ್ರವಾಗಿ ಸರಿಪಡಿಸಲು ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಉಪವಿಭಾಗಾಧಿಕಾರಿಯವರಿಗೆ ಮತ್ತು ಶಾಖಾಧಿಕಾರಿಗಳಿಗೆ ಸೂಚಿಸಿದರು. ನಂತರ ಸಭೆಯಲ್ಲಿ ಹಾಜರಿದ್ದ ರೈತಮುಖಂಡರು, ರೈತರು, ಗ್ರಾಹಕರು ಮತ್ತು ಸಾರ್ವಜನಿಕರಿಂದ ಮೌಖಿಕವಾಗಿ/ಲಿಖಿತವಾಗಿ ದೂರುಗಳನ್ನು ಸ್ವೀಕರಿಸಲಾಯಿತು.

ಈ ಕೆಳಕಂಡ ದೂರುಗಳನ್ನು ಸ್ವೀಕರಿಸಿ ಅದನ್ನು ಸರಿಪಡಿಸುವ ಬಗ್ಗೆ ಚರ್ಚಿಸಲಾಯಿತು.

| ಕ್ರ. ಸಂ | ದೂರುದಾರರ ವಿವರ | ವಿಷಯ | ಕ್ರಮ |
|---|---|---|---|
| 1. | ಶ್ರೀ ಶಿವರಾಮು, ಬಿ ಬೆಟ್ಟಳ್ಳಿ 9845361515 | ಬಿ ಬೆಟ್ಟಳ್ಳಿ ಯಲ್ಲಿರುವ 63ಕೆ.ವಿ.ಎ ಪರಿವರ್ತಕದ ವೈರಿಂಗ್ ಸಟ್ಟುಹೋಗಿರುವುದರಿಂದ ಪೂರ್ತಿ ವೈರಿಂಗನ್ನು ಸರಿಪಡಿಸಬೇಕಾಗಿ ದೂರಿದರು.<br>ಬಿ ಬೆಟ್ಟಳ್ಳಿ ಶಾಲೆಯ ದೇವರಕಟ್ಟೆ ಹತ್ತಿರ ಅರಳಿಮರ ಲೈನ್ ಮಧ್ಯೆ ಇರುವುದರಿಂದ ತೆಗೆಯಬೇಕೆಂದು ಕೋರಿದರು. | ಚಾಮನಹಳ್ಳಿ ಶಾಖಾಧಿಕಾರಿಗಳಿಗೆ ಎಲ್.ಟಿ ಕಿಟ್ ಡ್ರಾ ಮಾಡಿ ಶೀಘ್ರವಾಗಿ ಬದಲಾಯಿಸುವಂತೆ ತಿಳಿಸಿದರು.<br>ಲೈನ್‌ಗೆ ತಗುಲುವ ಮರವನ್ನು ತೆಗೆಯುವಂತೆ ಸೂಚಿಸಿದರು. |
| 2. | ಶ್ರೀ ನಿಂಗೇಗೌಡ, 8453608697 | ಕುಂತನಹಳ್ಳಿ ಯಲ್ಲಿ ಹಳೆಯದಾಗಿರುವ ವಿದ್ಯುತ್ ವೈರುಗಳನ್ನು ಬದಲಾಯಿಸುವಂತೆ ದೂರಿದರು. | ಚಾಮನಹಳ್ಳಿ ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 3. | ಶ್ರೀ ರಾಜು, ಹಿಟ್ಟುವಳ್ಳಿ, 9845016505 | ಹಿಟ್ಟುವಳ್ಳಿ ಗ್ರಾಮದ ಊರೊಳಗಡೆ ರಸ್ತೆಗೆ ಅಡ್ಡವಾಗಿರುವ 25 ಕೆ.ವಿ.ಎ ಪರಿವರ್ತಕವನ್ನು ಸ್ಥಳಾಂತರಿಸುವಂತೆ ದೂರಿದರು. | ತುಂಬ್ಲಾ ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 4. | ಶ್ರೀ ಮಂಜು ರಂಗಸಮುದ್ರ, 9901677845 | ರಂಗಸಮುದ್ರ ದಲ್ಲಿ 11 ಕೆ.ವಿ/ಎಲ್.ಟಿ ವಿದ್ಯುತ್ ಮಾರ್ಗಗಳನ್ನು (re-allignment) ಸರಿಪಡಿಸುವಂತೆ ದೂರಿದರು | ತುಂಬ್ಲಾ ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 5. | ಶ್ರೀ ರಾಜು, ಅತ್ತಹಳ್ಳಿ, 9980333348 | ದೂರಸಂಪರ್ಕ ಡಿಶ್ ಕೇಬಲ್ ವೈರುಗಳನ್ನು ಸರಿಯಾಗಿ ನಿರ್ವಹಿಸಲು ಮತ್ತು ಕೇಬಲ್ ಆಪರೇಟರುಗಳಿಂದ ಕಂಬಕ್ಕೆ ಇಂತಿಷ್ಟು ಎಂದು ಹಣ ಪಾವತಿಸಿಕೊಳ್ಳಬೇಕೆಂದು ದೂರಿದರು.<br>ಮಲಿಯೂರು ಫ್ಯಾಕ್ಟರಿಯ ಸುತ್ತಮುತ್ತಲಿನ ಜಮೀನಿನವರು ವ್ಯವಸಾಯಕ್ಕೆಂದು ತೆಗೆದುಕೊಂಡಿರುವ ಪಂಪ್‌ಸೆಟ್ಟಿನ ನೀರನ್ನು ಫ್ಯಾಕ್ಟರಿಗೆ ಬಳಸುತ್ತಿದ್ದಾರೆ ಎಂದು ದೂರಿದರು. | ಇದರ ಬಗ್ಗೆ ಕ್ರಮವಹಿಸುವಂತೆ ಎಲ್ಲಾ ಶಾಖಾಧಿಕಾರಿಗಳಿಗೆ ಸೂಚಿಸಿದರು.<br>ಚಾಮನಹಳ್ಳಿ ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲು ಸೂಚಿಸಿದರು. |
| 6. | ಶ್ರೀ ನಾರಾಯಣ, ರೈತ ಸಂಘ ಮುಖಂಡರು, 9448055920 | ಮುಂದಿನ ಬೇಸಿಗೆಯೊಳಗೆ ವಿದ್ಯುತ್ ಮಾರ್ಗ ನಿರ್ವಹಣೆ ಮಾಡುವ ಬಗ್ಗೆ<br>ಮುಂದಿನ ಸಭೆಗಳಿಗೆ ಅರಣ್ಯ ಇಲಾಖೆಯವರನ್ನು ಅಹ್ವಾನಿಸಲು, ಇದರಿಂದ ವಿದ್ಯುತ್ ಮಾರ್ಗಗಳ ಕೆಳಗೆ ಮರ ಗಿಡಗಳನ್ನು ಬೆಳೆಸುವುದರಿಂದ ಆಗುವ ತೊಂದರೆ ಮತ್ತು ದೂರುಗಳ ಬಗ್ಗೆ ಅವರಿಗು ತಿಳಿಯುತ್ತದೆಂದು ಸೂಚಿಸಿದರು. | ಎಲ್ಲಾ ಶಾಖಾಧಿಕಾರಿಗಳಿಗೆ ವಾರಕ್ಕೊಂದರಂತೆ ವಿದ್ಯುತ್ ಮಾರ್ಗಗಳನ್ನು ನಿರ್ವಹಿಸಲು ಸೂಚಿಸಿದರು. |

| | | | |
|---|---|---|---|
| 7. | ಶ್ರೀ ರಂಗಸ್ವಾಮಿ<br>9448993481 | ಕುಂತನಹಳ್ಳಿ ಗ್ರಾಮದ ಬಳಿ ವಿದ್ಯುತ್ ಮಾರ್ಗಗಳ ಮಧ್ಯೆ ಬೆಳೆದಿರುವ ಮರಗಳನ್ನು ತೆಗೆಯುವಂತೆ ದೂರಿದರು.<br>ತುರುಗನೂರು ಬಳಿ 11 ಕೆ.ವಿ/ಎಲ್.ಟಿ ವಿದ್ಯುತ್ ಮಾರ್ಗಗಳನ್ನು (re-allignment) ಸರಿಪಡಿಸುವಂತೆ ದೂರಿದರು | ಚಾಮನಹಳ್ಳಿ ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 8. | ಸೋಮೇಶ್<br>9845872436 | ಅರವಟ್ಟಿಗೆಕೊಪ್ಪಲು ಊರಿನ ಪರಿವರ್ತಕವನ್ನು ಸ್ಥಳಾಂತರಿಸಬೇಕೆಂದು ಮತ್ತು ವಾಲಿಕೊಂಡಿರುವ ಕಂಬಗಳನ್ನು ಸರಿಪಡಿಸಬೇಕೆಂದು ದೂರಿದರು | ಮಾದಿಗಹಳ್ಳಿ ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪ-ವಿಭಾಗ, ಬನ್ನೂರು

ಕ್ರಮ ಸಂಖ್ಯೆ : ಸ.ಕಾ.ನಿ (ವಿ)/ಹಿಸ/ಬ/2019-20/ 1264-71 ದಿನಾಂಕ : 28.11.2019

ಪ್ರತಿಗಳು.

- ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಅಧೀಕ್ಷಕ ಇಂಜಿನಿಯರ್(ವಿ), ಚಾವಿಸನಿನಿ., ಕಾ ಮತ್ತು ಪಾ ವೃತ್ತ, ಮೈಸೂರು ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ., ನಂಜನಗೂಡು, ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಎಲ್ಲಾ ಶಾಖಾಧಿಕಾರಿಗಳು/ ಹಿರಿಯ ಸಹಾಯಕ/ ಮುಖ್ಯ ಕಡತಕ್ಕೆ.